ವಿಷಯ:- ಹುಬ್ಬಳ್ಳಿಯ ಸೆಂಟ್ರಲ್ ಬಸ್ ನಿಲ್ದಾಣದ ಕೆಲಸವನ್ನು ಪೂರ್ಣಗೊಳಿಸಲು ಒತ್ತಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 227 (533)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ ನಗರದ ಗೋಕುಲ ರಸ್ತೆಯಲ್ಲಿ ಸೆಂಟ್ರಲ್ ಬಸ್ ಸ್ಟ್ಯಾಂಡ್ ನಿರ್ಮಾಣದ ಕೆಲಸವನ್ನು 1996ರ ಮಾರ್ಚ್ ತಿಂಗಳಲ್ಲಿ ಪ್ರಾರಂಭಿಸದಿರಲು ಕಾರಣಗಳೇನು? ಎಷ್ಟು ಅವಧಿಯಲ್ಲಿ ಈ ಬಸ್ ಸ್ಟ್ಯಾಂಡ್ ನಿರ್ಮಾಣ ಕೆಲಸ ಪೂರ್ಣಗೊಳಿಸಲಾಗುವುದು?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಈ ಕೆಲಸಕ್ಕೆ ಒಂದೇ ಒಂದು ಟೆಂಡರ್ ಬಂದಿದ್ದು, ಟೆಂಡರಿನಲ್ಲಿ ಗುತ್ತಿಗೆದಾರರು ಹೆಚ್ಚಿನ ದರಗಳನ್ನು ನಮೂದಿಸಿದ್ದರಿಂದ ಅವರೊಡನೆ ಟೆಂಡರ್ ದರಗಳನ್ನು ಇಳಿಸುವ ಬಗ್ಗೆ ಸಂಧಾನ ನಡೆಸುವುದರಲ್ಲಿ ಹಾಗೂ ಗುತ್ತಿಗೆದಾರರ ಪೂರ್ವಭಾವಿಗಳನ್ನು ವಿಚಾರಿಸುವ ಕ್ರಮಗಳಿಂದಾಗಿ ಟೆಂಡರ್‌ಗೆ ಮಂಜೂರಾತಿ ನೀಡಲು ವಿಳಂಬವಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ದಿನಾಂಕ:9-5-96ರಿಂದ ಪ್ರಾರಂಭವಾಗಿದ್ದು 18 ತಿಂಗಳೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ವಿಷಯ:- 94-95ರಿಂದ 95-96ರವರೆಗೆ ಆರಾಧನಾ ಸಮಿತಿಗಳಿಗೆ ಬಿಡುಗಡೆ ಮಾಡಿದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 228 (530)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1994-95 ಮತ್ತು 1995-96ನೇ ಸಾಲಿನಲ್ಲಿ ರಾಜ್ಯದ ಆರಾಧನಾ ಸಮಿತಿಗಳಿಗೆ ನಿಗಧಿಪಡಿಸಿದ ಹಣವೆಷ್ಟು? ಅದರಲ್ಲಿ ಬಿಡುಗಡೆಯಾದ ಹಣವೆಷ್ಟು? ಉಳಿದ ಹಣ ಬಿಡುಗಡೆ ಆಗದಿರಲು ಕಾರಣಗಳೇನು? ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣ ಬಿಡುಗಡೆ ಆಗಿದೆ? ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಬಿ.ಮುನಿಯಪ್ಪಮುದ್ದಪ್ಪ (ಮುಜರಾಯಿ ಸಚಿವರು):-

ಅ) ವರ್ಷ	ಆಯವ್ಯಯದಲ್ಲಿ ಒದಗಿಸಿದ ಮೊತ್ತ ರೂ. ಕೋಟಿಗಳಲ್ಲಿ	ಬಿಡುಗಡೆ ಮಾಡಿದ ಮೊತ್ತ ರೂ. ಕೋಟಿಗಳಲ್ಲಿ	ವಿಧಾನಸಭಾ ಕ್ಷೇತ್ರವಾರು ನಿಗದಿಪಡಿಸದ ಮೊತ್ತ ರೂ.
1994-95	10.00 ಕೋಟಿ	6.71 ಕೋಟಿ	2,64,285-00
1995-96	5.00 ಕೋಟಿ	4.50 ಕೋಟಿ	1,95,036-00

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರೂ. 1,95,036-00 ಆದರೆ ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ತಾಲ್ಲೂಕುವಾರು ರೂ. 1,69,225-00 ಬಿಡುಗಡೆ ಮಾಡಲಾಗಿದೆ.

ಆರ್ಥಿಕ ಇಲಾಖೆಯಿಂದ ಬಿಡುಗಡೆಯಾದ ಪೂರ್ತಿ ಹಣವನ್ನು ಬಿಡುಗಡೆ ಮಾಡಲಾಗಿದೆಯಾದುದರಿಂದ ಮುಂದಿನ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ವಿಷಯ:- ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಪೀಡಿತ ಪ್ರದೇಶಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 230 (21)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1994-95, 1995-96ನೇ ಸಾಲುಗಳ ಅತಿವೃಷ್ಟಿ ಮತ್ತು ಅನಾವೃಷ್ಟಿ ಪೀಡಿತ ಜಿಲ್ಲೆಗಳಾವುವು?

ಆ) ಬರಗಾಲ ಪೀಡಿತ ಜಿಲ್ಲೆಗಳಾವುವು? ಮೇಲಿನ ವಿಚಾರದಲ್ಲಿ ಆದ ನಷ್ಟ ಹಾಗೂ ಪ್ರಾಣಹಾನಿಗಳು ಹಾಗೂ ಪರಿಹಾರದ ಬಗ್ಗೆ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳು, ಬಿಡುಗಡೆ ಆದ ಹಣ, ಖರ್ಚಾದ ಹಣ, ಉಳಿದ ಹಣವೆಷ್ಟು (ಜಿಲ್ಲಾವಾರು ವಿವರ ನೀಡುವುದು).